# Additional Information for the candidates for better Understanding Regarding Kannada Language Test.

As per the rule 7 of Karnataka civil Services (Direct Recruitment) (General) rules, 2021, passing S.S.L.C level Kannada Language Test has been made Compulsory for all the Recruitments. So in order to reduce the logistical problems and efforts on part of candidates to pass the Kannada Language Test in every recruitment process they participate and at the same time reduce the delay in evaluation, the honourable commission has come to a conclusion that in notifications subsequent to commencement of 2021 rules, if the candidate passes the Kannada Language Test then passing certificate should be issued and the records of the same shall be maintained in the commission.

If a candidate has passed the kannada language test once, then for subsequent recruitment candidate need not appear for Kannada Language Test.

But one must note that only appearing for Kannada Language Test is of no use, but passing is important .

So in case if a candidate has appeared for the kannada language test conducted by the commission but the results are not declared and commission conducts a subsequent kannada language test, then he can appear for the that Kannada Language Test. but the recent most result will considered. If the candidate appears Kannada Language Test for multiple times for various reasons it must be noted that the most recent **result will be considered.**

By taking all the above things into consideration, in schedule declared on 15-12-2022 Kannada Language Test is kept in all notified examinations.

As it has been declared in schedule the candidates who have applied for relevant notifications mentioned in the schedule if one wishes and requires to appear for the Kannada Language Test then opportunity made available on 25-02-2023 shall be used for clearing the Kannada Language Test.

## Additional Information for the candidates for better Understanding Regarding Kannada Language Test.

ಕರ್ನಾಟಕ ನಾಗರೀಕ ಸೇವೆಗಳು (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು 2021 ರ ಉಪನಿಯಮ 7 ರಲ್ಲಿರುವಂತೆ ಅಧಿಸೂಚಿಸಲಾಗುವ ಪ್ರತಿಯೊಂದು ನೇಮಕಾತಿಯ ಅಧಿಸೂಚನೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು S.S.L.C ಪರೀಕ್ಷಾ ಮಟ್ಟದ ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದು ಕಡ್ಡಾಯವಾಗಿರುತ್ತದೆ. ಆಯೋಗವು 2022ನೇ ಸಾಲಿನಲ್ಲಿ 2021ರ ನಿಯಮಗಳಡಿಯಲ್ಲಿ ಗ್ರೂಪ್ ಎ,ಬಿ ಮತ್ತು ಸಿ ವೃಂದದ ಹಲವಾರು ಅಧಿಸೂಚನೆಗಳನ್ನು ಹೊರಡಿಸಿದ್ದು, ಪ್ರತಿಯೊಂದು ಅಧಿಸೂಚನೆಗೆ ಪ್ರತ್ಯೇಕವಾಗಿ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆ ನಡೆಸಲು ಉಂಟಾಗುವ ಸಂಪನ್ಮೂಲ ತೊಂದರೆ (ಸಾಗಣೆ, ನಿರ್ವಹಣೆ ಹಾಗೂ ಆರ್ಥಿಕ ವೆಚ್ಚ) ಮತ್ತು ಅಭ್ಯರ್ಥಿಗಳು ಪ್ರತಿ ಬಾರಿ ಪರೀಕ್ಷೆಯನ್ನು ಬರೆಯುವ ಪರಿಶ್ರಮವನ್ನು ತಪ್ಪಿಸಲು ಹಾಗೂ ಮೌಲ್ಯ ಮಾಪನದಿಂದ ಉಂಟಾಗುವ ವಿಳಂಬವನ್ನು ತಪ್ಪಿಸಲು, 2021ರ ನಿಯಮಗಳು ಜಾರಿಗೆ ಬಂದ ನಂತರ ಹೊರಡಿಸಲಾಗಿರುವ ಅಧಿಸೂಚನೆಗಳನ್ನು ಒಟ್ಟುಗೂಡಿಸಿ ಕನ್ನಡ ಭಾಷಾ ಪರೀಕ್ಷೆಯನ್ನು ನಡೆಸಲು ಹಾಗೂ ಈ ಪರೀಕ್ಷೆಯಲ್ಲಿ ಉತ್ತೀರ್ಣವಾಗುವ ಅಭ್ಯರ್ಥಿಗಳಿಗೆ ಉತ್ತೀರ್ಣ ಪ್ರಮಾಣ ಪತ್ರವನ್ನು ನೀಡಲು ಮಾನ್ಯ ಆಯೋಗವು ತೀರ್ಮಾನಿಸಿದೆ.

ಅಭ್ಯರ್ಥಿಯು ಒಂದು ಬಾರಿ ಕನ್ನಡ ಭಾಷಾ ಪರೀಕ್ಷೆಯನ್ನು ಉತ್ತೀರ್ಣರಾದ್ದಲ್ಲಿ ಮುಂದಿನ ಇತರೆ ನೇಮಕಾತಿಯಲ್ಲಿ ಅದೇ ಫಲಿತಾಂಶವನ್ನು ಪರಿಗಣಿಸಲಾಗುವುದು ಇದರಿಂದ ಅಭ್ಯರ್ಥಿಯು ಮತ್ತೊಮ್ಮೆ ಪರೀಕ್ಷೆ ಬರೆಯುವ ಅಗತ್ಯವಿರುವುದಿಲ್ಲ.

ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾದ ಮಾತ್ರಕ್ಕೆ ಅರ್ಹರಾಗುವುದಿಲ್ಲ, ಆದರೆ ಪರೀಕ್ಷೆಯಲ್ಲಿ ನಿಗದಿಪಡಿಸಿದ ಅಂಕಗಳನ್ನು ಪಡೆದು ಉತ್ತೀರ್ಣರಾಗುವುದು ಮುಖ್ಯವಾಗಿರುತ್ತದೆ ಎಂಬ ಅಂಶವನ್ನು ಗಮನದಲ್ಲಿ ಇಟ್ಟುಕೊಳ್ಳಬೇಕಾಗಿರುತ್ತದೆ.

ಅಭ್ಯರ್ಥಿಗಳು ಒಮ್ಮೆ ಆಯೋಗವು ನಡೆಸುವ ಕನ್ನಡ ಭಾಷಾ ಪರೀಕ್ಷೆಗೆ ಹಾಜರಾಗಿದ್ದು, ಫಲಿತಾಂಶ ಪ್ರಕಟವಾಗದ ಕಾರಣ ಅಥವಾ ಇನ್ನಿತರೆ ಕಾರಣಗಳಿಂದ ಅಭ್ಯರ್ಥಿಗಳು ಕನ್ನಡ ಭಾಷಾ ಪರೀಕ್ಷೆಯನ್ನು ಬರೆಯಬೇಕಾದಲ್ಲಿ ಆಯೋಗವು ನಡೆಸುವ ಕನ್ನಡ ಭಾಷಾ ಪರೀಕ್ಷೆಯನ್ನು ಮತ್ತೊಮ್ಮೆ ಬರೆಯಬಹುದಾಗಿರುತ್ತದೆ. **ಈ ರೀತಿ ಒಂದಕ್ಕಿಂತ ಹೆಚ್ಚು ಬಾರಿ ಪರೀಕ್ಷೆ ಬರೆದಲ್ಲಿ ಕೊನೆಯ ಬಾರಿ ಬರೆದ (Recent Most Examination) ಪರೀಕ್ಷೆಯ ಫಲಿತಾಂಶವನ್ನು ಪರಿಗಣಿಸಲಾಗುವುದು** ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ದಿನಾಂಕ:15-12-2022ರಂದು ಪ್ರಕಟಿಸಲಾಗಿರುವ ವೇಳಾ ಪಟ್ಟಿಯಲ್ಲಿನ ಅಧಿಸೂಚನೆಗಳಿಗೆ ಸಂಬಂಧಿಸಿದಂತೆ ದಿನಾಂಕ:21-01-2023 ಮತ್ತು 22-01-2023ರಂದು ಪರೀಕ್ಷೆ ನಿಗದಿಪಡಿಸಲಾಗಿರುವ ಹುದ್ದೆಗಳಿಗೆ ನಡೆಸಲಾಗವ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯನ್ನು ಹಾಗೂ ವೇಳಾ ಪಟ್ಟಿಯಲ್ಲಿನ ಎಲ್ಲಾ ಅಧಿಸೂಚನೆಗಳನ್ನು ಒಟ್ಟುಗೂಡಿಸಿ ದಿನಾಂಕ: 25-02-2023ರಂದು ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯನ್ನು ನಿಗದಿಪಡಿಸಲಾಗಿರುತ್ತದೆ.